**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 1212/2022**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ

**// ವಿರುದ್ಧ //**

ಆರೋಪಿ ಃ ಮಹಿಪಾಲ

ದೋಷಾರೋಪಣೆ

| | |
|---|---|
| ಆರೋಪಿ. | ಮಹಿಪಾಲ ತಂದೆ ವೆಂಕಟಯ್ಯ ಕೋಟ್ಲಾ, ವಃ 27 ವರ್ಷ, ಉಃ ದಾಬಾ ಕೆಲಸ, ಸಾಃ ಪಲ್ಲೆರ್ಲ ಗ್ರಾಮ, ಮಂಡಲ, ಮದ್ದೂರು ಜಿಃ ನಾರಾಯಣಪೇಟ (ಎಪಿ) ಹಾವಃ ಬದ್ದೆಪಲ್ಲಿ ಗ್ರಾಮ ತಾಃ ಜಿಃ ಯಾದಗಿರಿ. |

ಮೊದಲನೆಯದಾಗಿ ದಿನಾಂಕಃ 24-05-2022 ರಂದು 4.30 ಪಿ. ಎಮ್. ಸುಮಾರಿಗೆ ಸೈದಾಪುರ ಪೋಲಿಸ್ ಠಾಣೆಯ ಹದ್ದಿಯಲ್ಲಿ ಬರುವ ಸೈದಾಪೂರ ಕರಿಬೆಟ್ಟ ಕ್ರಾಸ್ ಹತ್ತಿರ ಆರೋಪಿಯಾದ ನೀನು ಸಾರ್ವಜನಿಕ ಸ್ಥಳದಲ್ಲಿ 1) ರಟ್ಟಿನ ಬಾಕ್ಸನಲ್ಲಿ 180 ಎಮ್.ಎಲ್ ನ 4 ಓಲ್ಡ ಟಾವೇರಿನ ವಿಸ್ಕಿ ಟೆಟ್ರಾ ಪ್ಯಾಕೆಟಗಳು ಇದ್ದು ರೂ. 344/-. 2) 650 ಎಮ್, ಎಲ್ ನ 10 ಕಿಂಗ್ ಫಿಷರ ಬೀರು ಬಾಟಲುಗಳು ಇದ್ದು ರೂ. 160/-ರೂ. ಮದ್ಯ ಸಂಗ್ರಹಿಸಿ ಇಟ್ಟಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು 1) ರಟ್ಟಿನ ಬಾಕ್ಸನಲ್ಲಿ 180 ಎಮ್.ಎಲ್ ನ 4 ಓಲ್ಡ ಟಾವೇರಿನ ವಿಸ್ಕಿ ಟೆಟ್ರಾ ಪ್ಯಾಕೆಟಗಳು ಇದ್ದು ರೂ. 344/-. 2) 650 ಎಮ್, ಎಲ್ ನ 10 ಕಿಂಗ್ ಫಿಷರ ಬೀರು ಬಾಟಲುಗಳು ಇದ್ದು ರೂ. 160/-ರೂ. ನಗದು ಹಣ, ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

**3.** ಮೂರನೆಯದಾಗಿ ಆರೋಪಿಯಾದ ನೀನು ಸಾರ್ವಜನಿಕರಿಗೆ ಮದ್ಯಪಾನ ಮಾಡಲು ಅನುಕೂಲ ಮಾಡಿಕೊಡುತ್ತಿದ್ದು, ಮತ್ತು ಸ್ಥಳದಲ್ಲಿ ಮದ್ಯಪಾನ ನಿಷೇದ ಮಾಡಿದ್ದು ಗೊತ್ತಿದ್ದೂ ಆರೋಪಿಯಾದ ನೀನು ಅಕ್ರಮವಾಗಿ ಮದ್ಯಪಾನಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಈ ಮೂಲಕ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15(ಎ), 32(3) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 17-02-2025
ಸ್ಥಳಃ ಯಾದಗಿರಿ

(ಶ್ರೀ ರಾಹುಲ ಚಾಂಭಾರ)
ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು ಯಾದಗಿರಿ